ಮೆ. ಸ್ಟಾರ್ ಮಿನರಲ್ಸ್ ರವರು ಸಂಕ್ಲಾಪುರದ ಹತ್ತಿರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಒಟ್ಟು 25 ಎಕರೆ ಪ್ರದೇಶದ ಸರ್ವೆ ನಂ. 178/2 & 178/4 ನಲ್ಲಿ ವರ್ಷಕ್ಕೆ 4,80,000 ಟನ್ ಕಬ್ಬಿಣದ ಅದಿರು ಮತ್ತು 15,000 ಟಿ.ಪಿ.ಎ. ಮ್ಯಾಂಗನೀಸ್ ಅದಿರುಗಳ ಬೆನಿಫೀಸಿಯೆಶನ್ ಘಟಕಗಳನ್ನು ಸ್ಥಾಪನೆ ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ದಿನಾಂಕ: 10-08-2022 ರಂದು ಬೆಳಿಗ್ಗೆ 11.30 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ ಮೆ. ಸ್ಟಾರ್ ಮಿನರಲ್ಸ್ ಸರ್ವೆ ನಂ. 178/2 & 178/4 ಸಂಕ್ಲಾಪುರ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ(ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ | **ಅಧ್ಯಕ್ಷರು** |
| 2 | ಡಾ. ದೊಡ್ಡಶಾನಯ್ಯ, ಪರಿಸರ ಅಧಿಕಾರಿ & ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರ) ಕ.ರಾ.ಮಾ.ನಿ.ಮಂ.ಪ್ರಾದೇಶಿಕ ಕಛೇರಿ, ಬಳ್ಳಾರಿ | **ಸದಸ್ಯ ಸಮಾವೇಷಕರು** |
| ಹಾಜರಿದ್ದ ಅಧಿಕಾರಿಗಳ ವಿವರ | | |
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ | |
| 2 | ಶ್ರೀ ಹನಮಂತ ಕೊಪ್ಪದ, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ | |
| 3 | ಶ್ರೀ ಮಂಜುನಾಥ.ಪಿ ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾ.ಕ, ಬಳ್ಳಾರಿ | |
| 4 | ಶ್ರೀ ಅಮರೇಶ ತಹಶೀಲ್ದಾರರು (ಪ್ರೊಬೇಷನರಿ), ಹೊಸಪೇಟೆ | |
| 5 | ಶ್ರೀ ಮಲ್ಲಿಕಾರ್ಜುನಗೌಡ, ಕಂದಾಯ ನಿರೀಕ್ಷಕರು, ಹೊಸಪೇಟೆ | |
| 6 | ಶ್ರೀ ಕೆ. ಜಯಪ್ರತಾಪ್, ಗ್ರಾಮ ಲೆಕ್ಕಾಧಿಕಾರಿ, ಸಂಕ್ಲಾಪುರ | |
| ಮೆ: ಸ್ಟಾರ್ ಮಿನರಲ್ಸ್ ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | | |
| 1. | ಶ್ರೀ ಕೆ.ಗುರುಪ್ರಸಾದ್, ಪ್ರಮೋಟರ್ | |
| 2. | ಶ್ರೀ ಎ.ಕಂದನ, ಪ್ರಮೋಟರ್ | |
| 3. | ಶ್ರೀ ಮೆಹುಲ್ ಗೊಸಾಯಿ ಸಿ.ಇ.ಓ | |
| 4. | ಶ್ರೀ ಬಿ.ಎಸ್.ಗಿರೀಶ್, ಜನರಲ್ ಮ್ಯಾನೇಜರ್ | |
| 5 | ಶ್ರೀ ಜಿ. ಭೀಮಶೇಕರ್, ಪ್ಲಾಂಟ್ ಇನ್‌ಚಾರ್ಜ್ | |
| 6 | ಶ್ರೀ ಅಶ್ವತ್ ನಾರಾಯಣ, ಕನ್ಸಲ್ಟಟೆಂಟ್ | |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಮೆ. ಸ್ಟಾರ್ ಮಿನರಲ್ಸ್ ರವರು ಸಂಕ್ಲಾಪುರದ ಹತ್ತಿರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಒಟ್ಟು 25 ಎಕರೆ ಪ್ರದೇಶದ ಸರ್ವೆ ನಂ. 178/2 & 178/4 ನಲ್ಲಿ ವರ್ಷಕ್ಕೆ 4,80,000 ಟನ್ ಕಬ್ಬಿಣದ ಅದಿರು ಮತ್ತು 15,000 ಟಿ.ಪಿ.ಎ. ಮ್ಯಾಂಗನೀಸ್ ಅದಿರುಗಳ ಬೆನಿಫೀಸಿಯೆಶನ್ ಘಟಕಗಳನ್ನು ಸ್ಥಾಪನೆ ಮಾಡುವ ಉದ್ದೇಶಕ್ಕಾಗಿ ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫೆರೆನ್ಸ್ ಸಂಖ್ಯೆ : SEIAA 08 IND 2022 ದಿನಾಂಕ : 11-04-2022 ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಎನ್‌ವೀರ್ಪ್ರೋ ಸೌಲುಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 08-05-2022 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 17-06-2022 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ವಿಜಯನಗರ ರವರ ಆದೇಶದನ್ವಯ ದಿನಾಂಕ: 10-08-2022 ರಂದು ಬೆಳಿಗ್ಗೆ 11.30 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸದಿಗಂತ (ಕನ್ನಡ) ಹಾಗೂ ಟೈಮ್ಸ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 10-07-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 11-07-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು, ನೀಡಲಾಗಿರುತ್ತದೆ.**(ಅನುಬಂಧ-3)** ಈ ಯೋಜನೆಗೆ

ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ವಿಜಯನಗರ ಜಿಲ್ಲೆ, ಹೊಸಪೇಟೆ
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಹಶೀಲ್ದಾರರ ಕಾರ್ಯಾಲಯ, ಹೊಸಪೇಟೆ
- ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಹೊಸಪೇಟೆ
- ನಗರಸಭೆ ಕಾರ್ಯಾಲಯ, ಹೊಸಪೇಟೆ.
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆ ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ದಿನಾಂಕ: 11–07–2022 ರಂದು ಮಾಹಿತಿಯನ್ನು ನೀಡಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಹಳ್ಳಿಗಳಾದ (ಪಾಪಿನಾಯಕನಹಳ್ಳಿ, ವಡ್ರಹಳ್ಳಿ, ಜಿ.ಜಿ.ಕ್ಯಾಂಪ್, ನಾಗಪ್ಪ ಕ್ಯಾಂಪ್, ಕಾರಿಗನೂರು, ಇಂಗಳಗಿ, ಮಲಪನಗುಡಿ, ಕೊಂಡನಾಯಕನಹಳ್ಳಿ, ಸಂಕ್ಲಾಪುರ, ಜಂಬುನಾಥಹಳ್ಳಿ, ರಾಜಾಪುರ, ಕಲ್ಲಹಳ್ಳಿ, ವ್ಯಾಸನಕೆರೆ, ಗಾಳಮ್ಮನಗುಡಿ ಮತ್ತು ಹೊಸಪೇಟೆ) ಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿವರ್ದಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 08–08–2022 ರಂದು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ–4** ರಲ್ಲಿ ಲಗತ್ತಿಸಿದೆ)

ಮಾನ್ಯ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ದಿನಾಂಕ : 06–08–2022 ರಂದು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರಿಗೆ ಅಧಿಕಾರ ನೀಡಿ ದಿನಾಂಕ :10–08–2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. (ಅನುಬಂಧ–5 ರಲ್ಲಿ ಲಗತ್ತಿಸಿದೆ)

23/8/22

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ–ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 10–08–2022 ರಂದು ಬೆಳಿಗ್ಗೆ 11.30 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳವಾದ ಮೆ. ಸ್ಟಾರ್ ಮಿನರಲ್ಸ್ ಸರ್ವೆ ನಂ. 178/2 & 178/4 ಸಂಕ್ಲಾಪುರ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ವಲಯ ಕಛೇರಿಯ ಹಿರಿಯ ಪರಿಸರ ಅಧಿಕಾರಿ (ಪ್ರಭಾರ) ಹಾಗೂ ಪರಿಸರ ಅಧಿಕಾರಿಗಳಾದ ಡಾ. ದೊಡ್ಡಶಾನಯ್ಯ ಅವರು ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ಅವರಿಗೆ ಸ್ವಾಗತ ಕೋರಿದರು. ಮೆ.ಸ್ಟಾರ್ ಮಿನರಲ್ಸ್, ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14–09–2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯ ಅಧಿಸೂಚನೆ ದಿನಾಂಕ: 14–09–2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳ ಆದೇಶದಂತೆ ಮೆ.ಸ್ಟಾರ್ ಮಿನರಲ್ಸ್ ಕಂಪನಿ ಪರವಾಗಿ ಶ್ರೀ ಅಶ್ವತ್ ನಾರಾಯಣ, ಮೆ.ಎನ್‌ವೀರೋ ಸೌಲುಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ದದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು,

ಜಮೀನಿನ ಬಳಕೆ, ಸಸ್ಯೀಕರಣ ಪೋಟೊಗಳು, ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೊ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಜೆ.ಎಸ್.ರಮೇಶ್ ಗುಪ್ತಾ, ನಗರಸಭೆ ಸದಸ್ಯರು ಹೊಸಪೇಟೆ**– ರವರು ಮಾತನಾಡುತ್ತಾ, ಕರೋನ ಸಂಕಷ್ಟದ ಸಮಯದಲ್ಲಿ ಉದ್ಯೋಗವಿಲ್ಲದೇ ಸ್ಥಳೀಯರು ಕಷ್ಟದಲ್ಲಿದ್ದು ಉದ್ದಿಮೆ ಸ್ಥಾಪಿಸುವುದರಿಂದ ಅನುಕೂಲವಾಗುತ್ತದೆ ಎಂದರು. ಸದರಿ ಯೋಜನೆಯಿಂದ ಕಾರಿಗನೂರು ಮತ್ತು ಸುತ್ತಮುತ್ತಲು ಗ್ರಾಮಗಳ ಕಾರ್ಮಿಕರಿಗೆ ಲಾರಿ ಮಾಲೀಕರುಗಳಿಗೆ ಉದ್ಯೋಗ ದೊರಕುತ್ತದೆ ಎಂದು ತಿಳಿಸಿದರು. ಸುತ್ತಮುತ್ತಲಿನ ಗ್ರಾಮಗಳಿಗೆ ಸದರಿ ಕಂಪನಿಯ ವರದಾನವಾಗಿದೆ ಎಂದು ಅಭಿಪ್ರಾಯ ಪಟ್ಟರು. ಎಲ್ಲರೂ ಸದರಿ ಯೋಜನೆಯನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಕಾರಿಗನೂರು ಗ್ರಾಮದಲ್ಲಿ 300 ಲಾರಿಗಳಿದ್ದು ಕೆಲಸವಿಲ್ಲದೇ ನಿಂತಿದ್ದು ಕಾರ್ಖಾನೆ ಪ್ರಾರಂಭವಾಗುವುದರಿಂದ ಕೆಲಸ ಸಿಗುತ್ತದೆ ಎಂದು ತಿಳಿಸಿದರು. ಯೋಜನೆಯನ್ನು ಬೆಂಬಲಿಸುವಂತೆ ಮನವಿ ಮಾಡುತ್ತ ಕಾರ್ಖಾನೆ ಸ್ಥಾಪಿಸುವುದನ್ನು ಸ್ವಾಗತ ಮಾಡಿದರು.

2. **ಶ್ರೀ ತೇಜಾ ನಾಯಕ್**–ರವರು ಮಾತನಾಡುತ್ತಾ, ಕಾರ್ಖಾನೆ ಸ್ಥಾಪಿಸುವುದರಿಂದ ಯೋಜನೆಯ ಸುತ್ತಮುತ್ತಲಿನ ಗ್ರಾಮಗಳಾದ ಸಂಕ್ಲಾಪುರ, ಕಾರಿಗನೂರು, ಜಿ.ಜಿ.ಕ್ಯಾಂಪ್ ಗಳಲ್ಲಿನ ಅಸಂಘಟಿತ ಕೂಲಿ ಕಾರ್ಮಿಕರಿಗೆ, ಲಾರಿ ಮಾಲೀಕರಿಗೆ ಉದ್ಯೋಗ ದೊರಕುತ್ತದೆ ಎಂದು ತಿಳಿಸಿದರು. ಕಳೆದ ನಾಲ್ಕು ವರ್ಷಗಳಲ್ಲಿ ಈ ಭಾಗದಲ್ಲಿ ಕಾರ್ಖಾನೆಗಳು ಸ್ಥಾಪನೆಯಾಗದೇ ಸ್ಥಳೀಯರಿಗೆ ಉದ್ಯೋಗಗಳು ಲಭಿಸುತ್ತಿಲ್ಲ ಇಂತಹ ಸನ್ನಿವೇಶದಲ್ಲಿ ಸ್ಟಾರ್ ಮಿನರಲ್ಸ್ ಉದ್ದಿಮೆಯವರು ಸ್ಥಳೀಯರಿಗೆ ಮೊದಲ ಆಧ್ಯತೆಯಲ್ಲಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿದ್ದಾರೆ ಆದುದರಿಂದ ಸ್ಟಾರ್ ಮಿನ್‌ರಲ್ಸ್ ಕಾರ್ಖಾನೆಯನ್ನು ಬೆಂಬಲಿಸಬೇಕು ಎಂದು ತಿಳಿಸಿದರು.

3. **ಶ್ರೀ ರಾಮಕೃಷ್ಣ, ಕಾರಿಗನೂರು ಗ್ರಾಮ**–ರವರು ಮಾತನಾಡುತ್ತಾ, ಈ ಭಾಗದ ಸುತ್ತಮುತ್ತಲೂ ಸುಮಾರು 60 ವರ್ಷಗಳಿಂದ ಗಣಿಗಾರಿಕೆ ನಡೆಯುತ್ತಿದ್ದರೂ ಸ್ಥಳೀಯ ಗಣಿ ಕಾರ್ಮಿಕರಿಗೆ ಯಾವುದೇ ಅನುಕೂಲವಾಗಿಲ್ಲ ಎಂದು ತಿಳಿಸಿದರು. ಸ್ಥಳೀಯವಾಗಿ ವಿದ್ಯಾವಂತ ಯುವಕರಿದ್ದು ಅವರಿಗೆ ಉದ್ಯೋಗ ದೊರಕಿಲ್ಲ ನಿರುದ್ಯೋಗ ಸಮಸ್ಯೆ ಇದೆ ಎಂದು ತಿಳಿಸಿದರು. ಕಾರ್ಖಾನೆ ಪ್ರಾರಂಭಿಸಲು ಅಭ್ಯಂತರವಿಲ್ಲ ಆದರೆ ಕಾರ್ಖಾನೆ ಸ್ಥಾಪನೆಯಾದ ನಂತರ ಸ್ಥಳೀಯ ಕಾರ್ಮಿಕರಿಗೆ ಲಾರಿ ಮಾಲೀಕರಿಗೆ, ನಿರುದ್ಯೋಗಿಗಳಿಗೆ ಆಧ್ಯತೆ ಮೇರೆಗೆ ಉದ್ಯೋಗ ನೀಡುವಂತೆ ಕಾರ್ಖಾನೆಯ ಮಾಲೀಕರಲ್ಲಿ ಮನವಿ ಮಾಡಿದರು.

4. **ಶ್ರೀ ಎ.ಕೆ.ವಡೆರಪ್ಪ, ಇಂಗಳಗಿ ಗ್ರಾಮ**–ರವರು ಮಾತನಾಡುತ್ತಾ, ಕಾರಿಗನೂರು ಪಿ.ಕೆ.ಹಳ್ಳಿ, ಗಾರಿಗನೂರು ಗ್ರಾಮಗಳು ನಗರಕ್ಕೆ ಹೊಂದಿಕೊಂಡಂತೆ ಸಮೀಪದಲ್ಲಿ ಇದ್ದರೂ ಸಹ ಸದರಿ ಗ್ರಾಮಗಳಿಗೆ

ಉದ್ದಿಮೆಗಳಾಗಲೀ ಮೂಲಭೂತ ಸೌಕರ್ಯಗಳಾಗಲೀ ದೊರಕಿಲ್ಲ ಗ್ರಾಮಗಳು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ ಎಂದು ತಿಳಿಸಿದರು. ಸದರಿ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳು ಗಣಿ ಭಾದಿತ ಪ್ರದೇಶಗಳಾಗಿದ್ದರೂ ಗಣಿ ಅನುಧಾನ (ಡಿ.ಎಮ್.ಎಫ್) ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಇದ್ದು ಈ ಭಾಗದ ಗ್ರಾಮಗಳ ಅಭಿವೃದ್ಧಿ ಕಾರ್ಯಗಳಿಗೆ ಬಳಕೆಯಾಗಿಲ್ಲ ಎಂದು ತಿಳಿಸಿದರು. ಸದರಿ ಗಣಿ ಅನುಧಾನವನ್ನು ಜನಪ್ರತಿನಿಧಿಗಳು ರಸ್ತೆ, ಚರಂಡಿ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಈ ಹಿಂದೆ ಈ ಭಾಗದಲ್ಲಿ ಸರೋಜ್ ಅಲಾಯ್ಸ್ ಕಂಪನಿಯ ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳಿಗೆ ಉದ್ಯೋಗವನ್ನು ಕಲ್ಪಿಸಿತ್ತು ಸದರಿ ಕಂಪನಿಯ ಮುಚ್ಚಿದ ನಂತರ ಅದನ್ನು ಸ್ಟಾರ್ ಮಿನರಲ್ಸ್ ಕಾರ್ಖಾನೆಯವರು ಖರೀದಿಸಿ ಬೆನಿಫಿಕೇಶನ್ ಕಾರ್ಖಾನೆ ಪ್ರಾರಂಭಿಸಲು ಉದ್ದೇಶಿಸಿದ್ದು ಆ ಮೂಲಕ ಸ್ಥಳೀಯರಿಗೆ ಹೆಚ್ಚಿನ ಮಟ್ಟದಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಿರುವುದರಿಂದ ಸದರಿ ಉದ್ದಿಮೆಗೆ ಬೆಂಬಲವನ್ನು ನೀಡವಂತೆ ಮನವಿ ಮಾಡುತ್ತ ಯೋಜನೆಯನ್ನು ಸ್ವಾಗತಿಸಿದರು.

5. **ಶ್ರೀ ಮಂಜುನಾಥ ಕಾರಿಗನೂರು ಲಾರಿ ಮಾಲೀಕರ ಸಂಘದ ಅಧ್ಯಕ್ಷರು**-ರವರು ಮಾತನಾಡುತ್ತಾ, ಈ ಭಾಗದಲ್ಲಿ ಉದ್ದಿಮೆ ಪ್ರಾರಂಭವಾದರೆ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ ಆದುದರಿಂದ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು. ಇಲ್ಲಿ ಕೆಲವು ಕಾರ್ಮಿಕರಿದ್ದು, ಅವರಿಗೆ ಅನುಕೂಲ ಆಗುತ್ತದೆ ಎಂದರು. ಸ್ಟಾರ್ ಮಿನರಲ್ಸ್ ನವರು ಸ್ಥಳೀಯ ವಿದ್ಯಾವಂತರಿಗೆ ಉದ್ಯೋಗ ನೀಡುವಂತೆ ಕೋರಿದರು. ಈ ಭಾಗದಲ್ಲಿ ಆಸ್ಪತ್ರೆಯನ್ನು ಸ್ಥಾಪಿಸುವಂತೆ ಮನವಿ ಮಾಡಿದರು. ಸದರಿ ಕಾರ್ಖಾನೆಗೆ ತಮ್ಮ ಬೆಂಬಲವನ್ನು ಸೂಚಿಸಿದರು.

6. **ಶ್ರೀಮತಿ ಶಕುಂತಲ ಕಲ್ಲಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರು** -ರವರು ಮಾತನಾಡುತ್ತಾ, ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವಂತೆ ಕೋರಿದರು. ಹೊರ ರಾಜ್ಯದವರಿಗೆ ಕಂಪನಿಯಲ್ಲಿ ಕೆಲಸ ನೀಡದಂತೆ ಮನವಿ ಮಾಡಿದರು. ಸ್ಥಳೀಯವಾಗಿ ಲಾರಿಗಳಿದ್ದು ಲಾರಿ ಮಾಲೀಕರು ತಿಂಗಳ ಕಂತನ್ನು ಪಾವತಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ ಅಂತವರಿಗೆ ಉದ್ಯೋಗ ನೀಡುವಂತೆ ಮತ್ತು ಸ್ಥಳೀಯ ವಿದ್ಯಾವಂತ ಯುವಕರಿಗೆ, ಕಾರ್ಮಿಕರಿಗೆ ಮೊದಲ ಆದ್ಯತೆಯಲ್ಲಿ ಉದ್ಯೋಗ ನೀಡುವಂತೆ ಮನವಿ ಮಾಡಿದರು.

7. **ಶ್ರೀ ಯಲ್ಲಪ್ಪ ಗ್ರಾಮ ಪಂಚಾಯತಿ ಸದಸ್ಯರು, ರಾಜಾಪುರ ಗ್ರಾಮ**-ರವರು ಮಾತನಾಡುತ್ತಾ, ಸ್ಟಾರ್ ಮಿನರಲ್ಸ್ ಉದ್ದಿಮೆ ಸ್ಥಾಪಿಸುವುದರಿಂದ ಸ್ಥಳೀಯ ರೈತರಿಗೆ ಕೂಲಿ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ ಹಾಗೂ ಅವರ ಜೀವನ ಮಟ್ಟ ಸುಧಾರಣೆಯಾಗುತ್ತದೆ ಎಂದು ತಿಳಿಸಿದರು.

8. **ಶ್ರೀ ಜ್ಞಾನೇಶ್ವರ ಸಂಕ್ಲಾಪುರ ಗ್ರಾಮ**-ರವರು ಮಾತನಾಡುತ್ತಾ, ಸ್ಟಾರ್ ಮಿನರಲ್ಸ್ ಉದ್ದಿಮೆ ಸ್ಥಾಪಿಸುವುದನ್ನು ಸ್ವಾಗತಿಸುವುದಾಗಿ ತಿಳಿಸಿದರು. ಕಾರ್ಖಾನೆ ಸ್ಥಾಪಿಸುವುದರಿಂದ ಸ್ಥಳೀಯ ರೈತರಿಗೆ ಕೂಲಿ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ ಹಾಗೂ ಅವರ ಜೀವನ ಮಟ್ಟ ಸುಧಾರಣೆಯಾಗುತ್ತದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಪರಿಸರಕ್ಕೆ ಹಾನಿಯಾಗದಂತೆ ಹೆಚ್ಚಿನ ಕಾಳಜಿ ವಹಿಸಿ ಕಾರ್ಖಾನೆಯನ್ನು ಪ್ರಾರಂಭ ಮಾಡುವಂತೆ ಮನವಿ ಮಾಡಿದರು.

23/8/..

9. ಶ್ರೀ ಬಿ.ವಿ.ರೆಡ್ಡಿ **ಪರಿಸರವಾದಿಗಳು**–ರವರು ಮಾತನಾಡುತ್ತಾ, ಉದ್ದಿಮೆ ನಡೆಸುವುದರಿಂದ ಉಂಟಾಗುವ ತೊಂದರೆ/ಸಮಸ್ಯೆ ಗಳನ್ನು ಬಗೆಹರಿಸಲು ಉದ್ದಿಮೆ ಮಾಲೀಕರು, ಸ್ಥಳೀಯ ಮುಖಂಡರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವಂತೆ ತಿಳಿಸಿದರು. ಉದ್ದಿಮೆ ಸ್ಥಾಪನೆಯಿಂದ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಎಂದು ಯೋಜನೆಯನ್ನು ಸ್ವಾಗತಿಸಿದರು.

10. ಶ್ರೀ **ಜಂಬಯ್ಯ ಸಂಕ್ಲಾಪುರ ಗ್ರಾಮ**–ರವರು ಮಾತನಾಡುತ್ತಾ, ಸ್ಟಾರ್ ಮಿನರಲ್ಸ್ ಉದ್ದಿಮೆ ಪ್ರಾರಂಭವಾಗುವುದರಿಂದ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ, ಕೂಲಿ ಕಾರ್ಮಿಕರಿಗೆ ಮತ್ತು ವಿದ್ಯಾವಂತರಿಗೆ ಉದ್ಯೋಗಾವಕಾಶಗಳು ದೊರಕುತ್ತವೆ ಎಂದು ತಿಳಿಸಿದರು. ಸ್ಟಾರ್ ಮಿನರಲ್ಸ್ ಕಾರ್ಖಾನೆಯನ್ನು ಸ್ಥಾಪಿಸುವುದರಿಂದ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೂ ಸ್ಟಾರ್ ಲಭ್ಯವಾಗಲಿ ಎಂದು ಆಶಿಸಿದರು. ಸ್ಥಳೀಯರು ಕರೋನದಿಂದ ಮತ್ತು ಅತಿವೃಷ್ಠಿ, ಅನಾವೃಷ್ಠಿಯಿಂದ ಬಳಲುತ್ತಿದ್ದು ಉದ್ದಿಮೆ ಪ್ರಾರಂಭವಾಗುವುದರಿಂದ ಅವರಿಗೆ ಅನುಕೂಲವಾಗತ್ತದೆ ಎಂದು ತಿಳಿಸಿ ಉದ್ದಿಮೆಯನ್ನು ಸ್ವಾಗತಿಸಿದರು.

11. ಶ್ರೀ ಕೆ.ರಾಜು **ಕರವೇ ಅಧ್ಯಕ್ಷರು ಸಂಡೂರು**–ರವರು ಮಾತನಾಡುತ್ತಾ, ಸಭೆ ಕರೆದಿರುವುದು ಸಂತೋಷದ ವಿಷಯ ಎಂದರು. ಬೆನಿಫೀಕೇಶನ್ ಪ್ಲಾಂಟ್ ಸ್ಥಾಪಿಸಲು ಗ್ರಾಮಸ್ಥರು ಸಹಮತ ವ್ಯಕ್ತಪಡಿಸಿರುವುದು ಸಂತೋಷದ ವಿಷಯ ಎಂದರು. ಹೊರ ರಾಜ್ಯದವರಿಗೆ ಉದ್ಯೋಗ ನೀಡದಂತೆ ಮನವಿ ಮಾಡಿದರು. ನಂಡುಜಪ್ಪ ಮತ್ತು ಸರೋಜಿನಿ ವರದಿಯಂತೆ ಶೇಕಡಾ 80 ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ನೀಡುವಂತೆ ಮನವಿ ಮಾಡಿದರು. ಯೋಜನೆಗೆ ಸಹಮತ ವ್ಯಕ್ತಪಡಿಸಿ 60 ಸಂಘ ಸಂಸ್ಥೆಗಳು ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು.

12. ಶ್ರೀ **ಗೋಪಾಲಕೃಷ್ಣ ಸಂಕ್ಲಾಪುರ ಗ್ರಾಮ**–ರವರು ಮಾತನಾಡುತ್ತಾ, ಸುತ್ತಮುತ್ತಲ ಗ್ರಾಮಸ್ಥರ ಜೀವನದ ಮೂಲ ಕಾರ್ಖಾನೆ ಮತ್ತು ಗಣಿ ಕಂಪನಿಗಳಾಗಿದ್ದು ಇಂತಹ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುವಂತೆ ಕೋರಿದರು.

13. ಶ್ರೀಮತಿ **ಶಮಾ ಆರ್ ಶೇಕ್ ಹೊಸಪೇಟೆ**–ರವರು ಮಾತನಾಡುತ್ತಾ, ಸದರಿ ಕಾರ್ಖಾನೆಯಲ್ಲಿ ಮಹಿಳೆಯರಿಗೆ ಉದ್ಯೋಗ ನೀಡುವಂತೆ ಮನವಿ ಮಾಡಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ–7** ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ–8** ರಲ್ಲಿ ಲಗತ್ತಿಸಲಾಗಿದೆ)